KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಅಕ್ಟೋಬರ್ ೭, ೨೦೧೦ (ಆಶ್ವಯುಜ ೧೫, ಶಕ ವರ್ಷ ೧೯೩೨)	ಸಂಚಿಕೆ ೪೦

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 215 ಆಸೇವ 2010, ಬೆಂಗಳೂರು, ದಿನಾಂಕ: 06ನೇ ಸೆಪ್ಟೆಂಬರ್, 2010

ಈ ಕೆಳಕಂಡ ಕೆ.ಎ.ಎಸ್. (ಆಯ್ಕೆ ಶ್ರೇಣಿ/ಕಿರಿಯ ಶ್ರೇಣಿ) ಅಧಿಕಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ವರ್ಗಾಯಿಸಿ ನೇಮಿಸಿದೆ.

ಕ್ರ.ಸಂ.	ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಹುದ್ದೆ ಶ್ರೀಯುತರು :	ವರ್ಗಾಯಿಸಿ ನೇಮಿಸಲಾದ ಹುದ್ದೆ
1	ಎನ್. ಎಂ. ಪನಾಲಿ, ಆಯ್ಕೆ ಶ್ರೇಣಿ, ಮುಖ್ಯ ಆಡಳಿತಾಧಿಕಾರಿ, ಸರ್ಕಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೀದರ್	ಮುಖ್ಯ ಆಡಳಿತಾಧಿಕಾರಿ, ಸಂಜಯಗಾಂಧಿ ಅಪಘಾತ ಮತ್ತು ಪುನರ್ವಸತಿ ಆಸ್ಪತ್ರೆ, ಬೆಂಗಳೂರು–ಖಾಲಿ ಹುದ್ದೆಗೆ
2	ಬಿ. ಸಿ. ಸತೀಶ್, ಕಿರಿಯ ಶ್ರೇಣಿ, ನೇಮಕಾತಿ ನಿರೀಕ್ಷಣೆಯಲ್ಲಿ,	ಉಪವಿಭಾಗಾಧಿಕಾರಿ, ಚಿಕ್ಕೋಡಿ ಉಪವಿಭಾಗ, ಬೆಳಗಾಂ ಜಿಲ್ಲೆ–ಶ್ರೀ.ಪಿ.ಎನ್.ರವೀಂದ್ರ ಇವರ ಸ್ಥಾನದಲ್ಲಿ
3	ಪಿ.ಎನ್. ರವೀಂದ್ರ, ಕಿರಿಯ ಶ್ರೇಣಿ, ಉಪವಿಭಾಗಾಧಿಕಾರಿ, ಚಿಕ್ಕೋಡಿ ಉಪವಿಭಾಗ, ಬೆಳಗಾಂ ಜಿಲ್ಲೆ.	ಉಪವಿಭಾಗಾಧಿಕಾರಿ, ಇಂಡಿ ಉಪವಿಭಾಗ, ಬಿಜಾಪುರ ಜಿಲ್ಲೆ– ಖಾಲಿ ಹುದ್ದೆಗೆ
4	ಎ.ಎಂ.ಯೋಗೇಶ್, ಕಿರಿಯ ಶ್ರೇಣಿ, ಕೊಳ್ಳೇಗಾಲ ಉಪ ವಿಭಾಗ, ಚಾಮರಾಜನಗರ ಜಿಲ್ಲೆ.	ಉಪ ಆಡಳಿತಾಧಿಕಾರಿ, ಕಾಡಾ, ಮೈಸೂರು– ಖಾಲಿ ಹುದ್ದೆಗೆ
5	ಎ.ಬಿ. ಬಸವರಾಜು, ಕಿರಿಯ ಶ್ರೇಣಿ, ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹುಣಸೂರು.	ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪ ವಿಭಾಗ, ಚಾಮರಾಜನಗರ ಜಿಲ್ಲೆ – ಶ್ರೀ.ಎ.ಎಂ.ಯೋಗೇಶ್, ಇವರ ಸ್ಥಾನದಲ್ಲಿ
6	ಜಹೀರಾ ನಸೀಂ, ಕಿರಿಯ ಶ್ರೇಣಿ, ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ., ಗುಲ್ಬರ್ಗಾ ಹುದ್ದೆಗೆ ವರ್ಗಾವಣೆ ಆದೇಶದಲ್ಲಿ.	ಇವರ ವರ್ಗಾವಣೆ ಆದೇಶವನ್ನು ಮಾರ್ಪಡಿಸಿ ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ., ಮೈಸೂರು ಹುದ್ದೆಗೆ – ಶ್ರೀಮತಿ ಸುಧಾ ಇವರ ಸ್ಥಾನದಲ್ಲಿ ನೇಮಿಸಲು ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವಾಸುದೇವಮೂರ್ತಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿ.ಆ.ಸು.ಇ (ಸೇವೆಗಳು–2).

ಪಿ.ಆರ್. 1411

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 536 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 25ನೇ ಆಗಸ್ಟ್, 2010

ಶ್ರೀಮತಿ ಕವಿತಾಯೋಗಪ್ಪನವರ್, ತಹಶೀಲ್ದಾರ್, ಸ್ಥಳ ನಿರೀಕ್ಷಣೆಯಲ್ಲಿರುವ ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಿಯೋಜನೆ ಮೇಲೆ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು ಇಲ್ಲಿನ ಆಡಳಿತಾಧಿಕಾರಿ ಖಾಲಿ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆಯ ವಶಕ್ಕೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ. ಸಸಾಲಟ್ಟಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಸೇವೆಗಳು–3)

ಪಿ.ಆರ್. 1414

ಅಧಿಸೂಚನೆ

ಸಂಖ್ಯೆ: ಕಂಇ 468 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 24ನೇ ಆಗಸ್ಟ್, 2010

ಶ್ರೀ ಎಫ್.ಬಿ. ನಂದಗಡಿ, ನಿವೃತ್ತ ತಹಶೀಲ್ದಾರ್, ಇವರ ಖಾತೆಯಲ್ಲಿರುವ 173 ದಿನಗಳ ಗಳಿಕೆ ರಜೆಯನ್ನು ಕರ್ನಾಟಕ ಸೇವಾ ನಿಯಮಗಳು, ನಿಯಮ 118(1) (ಎ) ಹಾಗೂ 4 ರನ್ವಯ ನಗದೀಕರಿಸಲು ಮಂಜೂರಾತಿ ನೀಡಿದೆ.

ಸದರಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆಗಳು ಇರುವುದಿಲ್ಲವೆಂದು ಈ ಮೂಲಕ ದೃಢೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ. ಸಸಾಲಟ್ಟಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. 1415

CITY CIVIL COURT

NOTIFICATION

No. ADM-I(E) 1617/10, Dated : 8th September, 2010

Sri K.S. Jere, Asst. Registrar, City Civil Court, Bangalore who has retired from Service on attaining the age of superannuation w.e.f., 31-08-2010, is granted cash equivalent of leave salary for earned leave not exceeding 240 days at his credit on the date of his retirement i.e., w.e.f. 31-08-2010 in accordance with Rule 118-A of K.C.S.Rs.,

Further, it is certified that there are no departmental enquiries/criminal proceedings are pending against Sri K.S. Jere, Asst. Registrar of this Court, who has retired from Service on attaining the age of superannuation on the afternoon of 31-08-2010.

He shall be paid pay and allowances admissible for the period of earned leave at his credit as per rules.

By Order of the Prl. City Civil & Sessions Judge,
REGISTRAR,
, City Civil Court, Bangalore

P.R. 1416

PERSONNEL AND ADMINISTRATIVE REFORMS SECRETARIAT

NOTIFICATION

No. DPAR 292 SKM 2010, Bangalore, Dated 7th September, 2010

The deputation of Sri P.T. Rudra Gouda, on interstate deputation from Puducherry Civil Services (Selection Grade), presently working with Government of Karnataka as Addl. District Commissioner and Addl. District Magistrate, Gadag District, Gadag is extended by two more years with effect from 14-08-2010 or until further orders whichever is earlier, as his earlier period of deputation to Government of Karnataka ends on 13-08-2010 and he is continued in the existing post until further orders,

The terms & conditions issued already shall continue.

By Order and in the name of the Governor of Karnataka,
M. VASUDEVAMURTHY,
Under Secretary to Government,
DP & AR (Services-II).

P.R. 1417

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 210 ಸಿಶಾಸೇ 2010, ಬೆಂಗಳೂರು, ದಿನಾಂಕ: 01ನೇ ಸೆಪ್ಟೆಂಬರ್, 2010

ಇದೇ ಸಂಖ್ಯೆಯ ದಿನಾಂಕ : 29–07–2010ರ ಅಧಿಸೂಚನೆಯನ್ನು ಮುಂದುವರೆಸುತ್ತಾ, ಶ್ರೀ ಎಸ್.ಎನ್. ರಾಯನಗೌಡ್ರು, ಶಾಖಾಧಿಕಾರಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಹಾಗೂ ಶ್ರೀ ಬಾಲಕೃಷ್ಣ ರಾವ್, ಶಾಖಾಧಿಕಾರಿ, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ ಇವರುಗಳ ಜನ್ಮ ದಿನಾಂಕವು ಅನುಕ್ರಮವಾಗಿ 01–04–1951 ಹಾಗೂ 10–03–1951 ಆಗಿದ್ದು, ಇವರುಗಳು 60 ವರ್ಷ ವಯೋಮಿತಿಯು ಪೂರ್ಣಗೊಂಡು ದಿನಾಂಕ : 31–03–2011ರ ಅಪರಾಹ್ನದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವರು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎನ್. ಕೃಷ್ಣಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ, (ಸಿಬ್ಬಂದಿ)

ಪಿ.ಆರ್. 1418

ಅಧಿಸೂಚನೆ

ಸಂಖ್ಯೆ: ಸಿಆಸುಇ 40 ಇಆತ 2010, ಬೆಂಗಳೂರು, ದಿನಾಂಕ: 08ನೇ ಸೆಪ್ಟೆಂಬರ್, 2010

ಶ್ರೀ ರಂಗಯ್ಯ, ಉಪ ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ರಾಯಚೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಜಿಲ್ಲಾ ತರಬೇತಿ ಸಂಸ್ಥೆ, ಚಿಕ್ಕಬಳ್ಳಾಪುರ ಇಲ್ಲಿ ಖಾಲಿ ಇರುವ ಉಪ ಪ್ರಾಚಾರ್ಯರ ಹುದ್ದೆಗೆ ವರ್ಗಾಯಿಸಿ ನೇಮಿಸಲಾಗಿದೆ. ಸದರಿ ಅಧಿಕಾರಿಯು ಕೂಡಲೇ ವರ್ಗಾಯಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು ಮತ್ತು ಇದು ಕೋರಿಕೆ ವರ್ಗಾವಣೆಯಾದ ಕಾರಣ ಯಾವುದೇ ಭತ್ಯೆ ಪಡೆಯಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಬ್ದುಲ್ ರಹಮಾನ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ, (ಆಸು-ತರಬೇತಿ)

ಪಿ.ಆರ್. 1419

ಕರ್ನಾಟಕ ವಿಧಾನಸಭೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕವಿಸಸ/ಆ-1/33/ಎಫ್‌ಪಿಪಿ/97, ಬೆಂಗಳೂರು, ದಿನಾಂಕ: 13ನೇ ಸೆಪ್ಟೆಂಬರ್, 2010

ವಿಷಯ : ಕರ್ನಾಟಕ ವಿಧಾನಸಭೆ ಸಚಿವಾಲಯದ ಉಪ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

2003ರ ಕರ್ನಾಟಕ ವಿಧಾನ ಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 6 (ii)ರ ಪ್ರಕಾರ ಹಾಗೂ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 19(3)(ಎ)ನ್ನು ಓದಿಕೊಂಡಂತೆ ಈ ಸಚಿವಾಲಯದಲ್ಲಿ ಉಪ ಕಾರ್ಯದರ್ಶಿ (ಪ್ರ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಕೆ. ನೂರ್ ಮಹಮದ್, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 20025-525-22650-600-26250-675-28275ರಲ್ಲಿ ಉಪ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.

ಸಭಾಧ್ಯಕ್ಷರ ಆದೇಶಾನುಸಾರ,
ಎಂ. ಕೆ. ವಿಶಾಲಾಕ್ಷಿ,
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ.

ಪಿ.ಆರ್. 1420

ಅಧಿಸೂಚನೆ

ಸಂಖ್ಯೆ: ಕವಿಸಸ/ಆ-1/89/ಎಫ್‌ಪಿಪಿ/96-03, ಬೆಂಗಳೂರು, ದಿನಾಂಕ: 13ನೇ ಸೆಪ್ಟೆಂಬರ್, 2010

ವಿಷಯ : ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧೀನ ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

2003ರ ಕರ್ನಾಟಕ ವಿಧಾನ ಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 6 (ii)ರ ಪ್ರಕಾರ ಹಾಗೂ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 19(3)(ಎ)ನ್ನು ಓದಿಕೊಂಡಂತೆ ಈ ಸಚಿವಾಲಯದಲ್ಲಿ ಅಧೀನ ಕಾರ್ಯದರ್ಶಿ (ಪ್ರ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಅಧಿಕಾರಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 14050-350-14400-400-16800-450-19500-525-22650-600-25050ರಲ್ಲಿ ಅಧೀನ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.

1. ಶ್ರೀಮತಿ ಶಶಿಕಲಾ ಭಟ್, ಅಧೀನ ಕಾರ್ಯದರ್ಶಿ (ಪ್ರ)
2. ಶ್ರೀಮತಿ ಮುನೀರುನ್ನೀಸಾ, ಅಧೀನ ಕಾರ್ಯದರ್ಶಿ(ಪ್ರ)

ಸಭಾಧ್ಯಕ್ಷರ ಆದೇಶಾನುಸಾರ,
ಎಂ. ಕೆ. ವಿಶಾಲಾಕ್ಷಿ,
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ.

ಪಿ.ಆರ್. 1421

ಅಧಿಸೂಚನೆ

ಸಂಖ್ಯೆ: ಕವಿಸಸ/ಆ-1/114/ಎಫ್‌ಪಿಪಿ/2005, ಬೆಂಗಳೂರು, ದಿನಾಂಕ: 13ನೇ ಸೆಪ್ಟೆಂಬರ್, 2010

ವಿಷಯ : ಕರ್ನಾಟಕ ವಿಧಾನಸಭೆ ಸಚಿವಾಲಯದ ಶಾಖಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

2003ರ ಕರ್ನಾಟಕ ವಿಧಾನ ಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳ ನಿಯಮ 6 (ii)ರ ಪ್ರಕಾರ ಹಾಗೂ 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 19(3)(ಎ)ನ್ನು ಓದಿಕೊಂಡಂತೆ ಈ ಸಚಿವಾಲಯದಲ್ಲಿ ಶಾಖಾಧಿಕಾರಿ (ಪ್ರ) ಹಾಗೂ ಹಿರಿಯ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ನೌಕರರುಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ. 11400-300-12300-350-14400-400-16800-450-19500-525-21600ರಲ್ಲಿ ಶಾಖಾಧಿಕಾರಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲಾಗಿದೆ.

1. ಶ್ರೀ ಪಿ. ನಟರಾಜು, ಶಾಖಾಧಿಕಾರಿ (ಪ್ರ)
2. ಶ್ರೀ ಎಂ. ಮೋಹನ್, ಶಾಖಾಧಿಕಾರಿ (ಪ್ರ)
3. ಶ್ರೀ ಕೆ.ಜೆ. ಜೋಗಯ್ಯ, ಹಿರಿಯ ಸಹಾಯಕ

ಸಭಾಧ್ಯಕ್ಷರ ಆದೇಶಾನುಸಾರ,
ಎಂ. ಕೆ. ವಿಶಾಲಾಕ್ಷಿ,
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ.

ಪಿ.ಆರ್. 1422

ನಗರಾಭಿವೃದ್ಧಿ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ನಅಇ 534 ಮೈಅಪ್ರಾ 2010, ಬೆಂಗಳೂರು, ದಿನಾಂಕ: 9ನೇ ಸೆಪ್ಟೆಂಬರ್, 2010

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 3(3)(ಡಿ) ರನ್ವಯ ಶ್ರೀ ಬಿ. ರಾಮಕೃಷ್ಣ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಮಂಡ್ಯ, ಇವರನ್ನು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯರನ್ನಾಗಿ ಸರ್ಕಾರದ ಇಚ್ಛಾನುಸಾರ ಅಥವಾ ಅವರ ಅಧಿಕಾರದ ಅವಧಿಯವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತಕ್ಷಣದಿಂದ ಜಾರಿಗೆ ಬರುವಂತೆ ನಾಮ ನಿರ್ದೇಶನ ಮಾಡಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಂ. ಹಿರೇಮಠ,
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 1423

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ಅಧಿಕೃತ ಜ್ಞಾಪನ

ಸಂಖ್ಯೆ: ಯೋಇ 47 ಹೈಕಮಂ 2010, ಬೆಂಗಳೂರು, ದಿನಾಂಕ: 4ನೇ ಸೆಪ್ಟೆಂಬರ್, 2010

ವಿಷಯ : ಶ್ರೀ ಉಮೇಶ್ ಕುಸಗಲ್, ಕೆ.ಎ.ಎಸ್. (ಆಯ್ಕೆ ಶ್ರೇಣಿ), ಅಧಿಕಾರಿ ಇವರನ್ನು ಮರುಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ : ಅ.ಟಿ. ಸಂಖ್ಯೆ : ಸಿಆಸುಇ/125/ಆಸೇವಾ10/ಭಾ, ದಿನಾಂಕ : 02–08–2010.

ಶ್ರೀ ಉಮೇಶ್ ಕುಸಗಲ್, ಕೆ.ಎ.ಎಸ್. (ಆಯ್ಕೆ ಶ್ರೇಣಿ) ಅಧಿಕಾರಿ ನೇಮಕಾತಿ ನಿರೀಕ್ಷೆಯಲ್ಲಿದ್ದ ಇವರನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂಖ್ಯೆ : ಸಿಆಸುಇ 125 ಆಸೇವಾ 2010/(ಭಾ) ದಿನಾಂಕ : 02–08–2010ರ ಅಧಿಸೂಚನೆ ಮೇರೆಗೆ ವರ್ಗಾವಣೆ ಮಾಡಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲ್ಬರ್ಗಾ ಇಲ್ಲಿ ಖಾಲಿ ಇರುವ ಜಂಟಿ ಕಾರ್ಯದರ್ಶಿ ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ಯೋಜನಾ ಇಲಾಖೆಯ ವಶಕ್ಕೆ ನೀಡಲಾಗಿದೆ. ಇವರನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶ ಹೊರಡಿಸುವವರೆಗೆ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲ್ಬರ್ಗಾ ಇಲ್ಲಿಗೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಬಿ. ಚಿಕ್ಕರಾಜು,
ಸರ್ಕಾರದ ಅಧೀನ ಕಾರ್ಯದರ್ಶಿ–1 & 2,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಪಿ.ಆರ್. 1424

PERSONNEL AND ADMINISTRATIVE REFORMS SECRETARIAT

NOTIFICATION

No. DPAR 483 SAS 2010, Bangalore, Dated 9th September, 2010

Dr. H. Basker, IAS (KN 83), waiting for posting is posted with immediate effect and until further orders as ***Principal Secretary to Government, Department of Public Enterprises*** in the existing vacancy.

By Order and in the name of the Governor of Karnataka,
K.G. ANANTHA,
Under Secretary to Government,
DP & AR (Services-I).

P.R. 1425

NOTIFICATION

No. DPAR 88 SPS 2010, Bangalore, Dated 13th September, 2010

Shri M.N. Reddi, IPS (KN-84), Additional Director General of Police, CID, Bangalore, is posted as Additional Director General of Police, KSRP, Bangalore in the cadre post for a day vice Sri G.M. Hayath, IPS, proceeding on leave. From the next day

Sri M.N. Reddi, IPS is re-posted as Additional Director General of Police, CID, Bangalore and Sri G.M. Hayath, IPS, is re-posted as ADGP, KSRP, Bangalore.

Shri Prem Shankar Meena, IPS (KN-84), Additional Director General of Police & Executive Director, KSPHC, Bangalore is posted as Additional Director General of Police, Internal Security Division, Bangalore in the cadre post for a day vice Shri Bipin Gopal Krishna, IPS, proceeding on leave. From the next day Shri Prem Shankar Meena, IPS is re-posted as Additional Director General of Police & Executive Director, KSPHC, Bangalore and Shri Bipin Gopal Krishna, IPS, is re-posted as ADGP, ISD, Bangalore.

By Order and in the name of the Governor of Karnataka,
K.G. ANANTHA,
Under Secretary to Government,
DP & AR (Services-I).

P.R. 1426

NOTIFICATION

No. DPAR 470 SAS 2010, Bangalore, Dated 8th September, 2010

Dr. H. Shashidhar, IAS (KN 88), Managing Director, Karnataka State Bewerages, Bangalore, is transferred with immediate effect and his services are placed at the disposal of ***Karnataka Electricity Regulatory Commission*** until further orders for being appointed as ***OMBUDSMAN of the Karnataka Electricity Regulatory Commission.***

Sri Ajay Seth, IAS, Secretary to Government, Finance Department (B & R) is placed in additional charge of the post of ***Managing Director, Karnataka State Bewerages*** until further orders.

By Order and in the name of the Governor of Karnataka,
K.G. ANANTHA,
Under Secretary to Government,
DP & AR (Services-I).

P.R. 1427

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 410 ಸಆಸೇ 2010, ಬೆಂಗಳೂರು, ದಿನಾಂಕ: 09ನೇ ಸೆಪ್ಟೆಂಬರ್, 2010

ಶ್ರೀ ಟಿ.ಎಂ. ವಾಸುದೇವರಾವ್, ಶಾಖಾಧಿಕಾರಿ, ಕರ್ನಾಟಕ ಸರ್ಕಾರ ಸಚಿವಾಲಯ, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವೇತನ ಶ್ರೇಣಿ ರೂ. 14050–350–14400–400–16800–450–19500–525–22650–600–25050ರ ಅಧೀನ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಅಪರಾಧಗಳು) – ಶ್ರೀ ಪಿ. ಶಿವರಾಮ್‌ಭಟ್ ಇವರ ರಜೆಯಿಂದ ತೆರವಾಗಿರುವ ಸ್ಥಾನದಲ್ಲಿ ನೇಮಿಸಲಾಗಿದೆ.

ಭಾಗ

ಕರ್ನಾಟಕ ಸರ್ಕಾರ ಸಚಿವಾಲಯದ ಸೇವೆಗೆ ಸೇರಿದ ಈ ಕೆಳಕಂಡ ಅಧೀನ ಕಾರ್ಯದರ್ಶಿಗಳನ್ನು ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಿಗೆ ವರ್ಗಾಯಿಸಿ ನೇಮಿಸಲಾಗಿದೆ ;

ಕ್ರ ಸಂ	ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ವರ್ಗಾಯಿಸಿ ನೇಮಿಸಲಾದ ಹುದ್ದೆ/ಇಲಾಖೆ
1	**ಶ್ರೀ ವಿ. ಶ್ರೀರಾಮರೆಡ್ಡಿ,** ಅಧೀನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ	ಅಧೀನ ಕಾರ್ಯದರ್ಶಿ, ವೆಚ್ಚ ಸುಧಾರಣಾ ಆಯೋಗ–ಶ್ರೀ ಸುರೇಶ್ ಬಿ. ಕೃಷ್ಣಪ್ಪನವರ್ ಇವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ
2	**ಶ್ರೀ ಕೆ.ಬಿ.ಧನಂಜಯಪ್ಪ,** ಅಧೀನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.	ಅಧೀನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ– ಶ್ರೀ ವಿ. ಶ್ರೀರಾಮರೆಡ್ಡಿ, ಇವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ
3	**ಶ್ರೀ ಎಸ್. ರಾಜು,** ಅಧೀನ ಕಾರ್ಯದರ್ಶಿ, ತೋಟಗಾರಿಕಾ ಇಲಾಖೆ	ಅಧೀನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ. ಶ್ರೀ ಕೆ.ಬಿ.ಧನಂಜಯಪ್ಪ, ಇವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ
4	**ಶ್ರೀ ಬಿ.ಸಿ. ಪ್ರಕಾಶ್,** ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸೇವೆಗಳು ಮತ್ತು ಸಮನ್ವಯ)	ಅಧೀನ ಕಾರ್ಯದರ್ಶಿ, ತೋಟಗಾರಿಕಾ ಇಲಾಖೆ–ಶ್ರೀ ಎಸ್. ರಾಜು ಇವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ
5	**ಶ್ರೀ ಎಲ್.ಎಸ್. ವಾಸನ್,** ಅಧೀನ ಕಾರ್ಯದರ್ಶಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ	ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು ಮತ್ತು ಸಮನ್ವಯ) – ಶ್ರೀ ಬಿ.ಸಿ. ಪ್ರಕಾಶ್, ಇವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ
6	**ಶ್ರೀ ಅಬ್ಬಾಸ್ ಷರೀಫ್,** ಅಧೀನ ಕಾರ್ಯದರ್ಶಿ, (ನೇಮಕಾತಿ ನಿರೀಕ್ಷಣೆಯಲ್ಲಿ)	ಅಧೀನ ಕಾರ್ಯದರ್ಶಿ, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ – ಶ್ರೀ ಎಲ್.ಎಸ್. ವಾಸನ್, ಇವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು ಇಲಾಖೆ, (ಸೇವೆಗಳು–3)

ಪಿ.ಆರ್. 1428

ಅಧಿಸೂಚನೆ

ಸಂಖ್ಯೆ: ಸಿಆಸುಇ 16 ಸೇಇಮು 2010, ಬೆಂಗಳೂರು, ದಿನಾಂಕ: 09ನೇ ಸೆಪ್ಟೆಂಬರ್, 2010

ಡಾ: ಕೆ. ಚಂದ್ರಶೇಖರ್ ನಾಯಕ್, ಅಪರ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಸ್ತುತ ಉಪ ಯೋಜನಾ ಆಡಳಿತಾಧಿಕಾರಿ, ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ ಬೆಂಗಳೂರು. ಇವರಿಗೆ ವೇತನ ಶ್ರೇಣಿ ರೂ. 26250–675–30300–750–34800–850–36500ರ ನಿರ್ದೇಶಕರ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಾನಪನ್ನ ಬಡ್ತಿ ನೀಡಿ ನಿರ್ದೇಶಕರು, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಮಾಗಡಿ ರಸ್ತೆ, ಬೆಂಗಳೂರು ಈ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು ಇಲಾಖೆ, (ಸೇವೆಗಳು–3)

ಪಿ.ಆರ್. 1429

PERSONNEL AND ADMINISTRATIVE REFORMS SECRETARIAT

NOTIFICATION

No. DPAR 61 SPS 2009, Bangalore, Dated 13th September, 2010

Following IPS probationers of 2008 batch bome on the cadre of Karnataka are Posted with immediate and until further orders to the sub- divisions mentioned against their names :

1	Sri. Anupam Agrawal	Assistant Superintendent of Police, Davangere Rural Sub-Division, Davangere District in the vacant post.
2	Sri. Ram Niwas Sepat	Assistant Superintendent of Police, Kundapur Sub-Division, Udupi District in the vacant post.
3	Sri. Boralingaiah M.B	Assistant Superintendent of Police, Tiptur Sub-Division, Tumkur District in the vacant post.
4	Sri. Ajay Hilori	Assistant Superintendent of Police, Bijapur Sub-Division, Bijapur District in the vacant post.

5	Smt. Rohini Katoch	Assistant Superintendent of Police, Bhatkal Sub-Division, Karwar District in the vacant post.

:

By Order and in the name of the Governor of Karnataka,
K.G. ANANTHA,
Under Secretary to Government,
DPAR (Services-I).

P.R. 1430

ಒಳಾಡಳಿತ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಒಇ 318 ಪೊಸಿಪ 2009, ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್, 2010

ಸರ್ಕಾರದ ಅಧಿಸೂಚನೆ ಸಂಖ್ಯೆ ಒಇ 318 ಪೊಸಿಪ 2009 ದಿನಾಂಕ 05–07–2010ರ ಭಾಗ–2ರಲ್ಲಿನ ಕ್ರಮ ಸಂಖ್ಯೆ 1ರಲ್ಲಿ ನಮೂದಿಸಿರುವ ಶ್ರೀ ದೇವಸಿಂಗ್ ನಾಯಕ್, ಡಿವೈ.ಎಸ್.ಪಿ, ಗುಪ್ತವಾರ್ತೆ, ಬೆಂಗಳೂರು ಇವರಿಗೆ ಮುಂಬಡ್ತಿಯ ನಂತರ ಸ್ಥಳ ನಿಯುಕ್ತಿಗೊಳಿಸಿದ ಹುದ್ದೆ "ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಹಾಗೂ ಡೆಪ್ಯೂಟಿ ಕಮಾಂಡೆಂಟ್, ಹೋಂ ಗಾರ್ಡ್ಸ್, ಬೆಂಗಳೂರು" ಇದರ ಬದಲಿಗೆ "ಡೆಪ್ಯೂಟಿ ಕಮಾಂಡೆಂಟ್ ಜನರಲ್, ಹೋಂ ಗಾರ್ಡ್ಸ್ ಮತ್ತು ಪದನಿಮಿತ್ತ ಉಪ ನಿರ್ದೇಶಕರು, ಸಿವಿಲ್ ಡಿಫೆನ್ಸ್, ಬೆಂಗಳೂರು" (Deputy Commandant General, Home Guards & Ex-Officio Deputy Director, Civil Defence, Bangalore) ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ಪಿ.ಆರ್. 1431

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಾಕೈ 84 ಸಸಕಾ 2010, ಬೆಂಗಳೂರು, ದಿನಾಂಕ: 16ನೇ ಸೆಪ್ಟೆಂಬರ್, 2010

ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಆರ್. ಟಿ. ದೇಸಾಯಿರವರು ಮರುನೇಮಕಾತಿಗಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಲ್ಲಿ ನಿರೀಕ್ಷಿಸಿದ ದಿನಾಂಕ 08–07–2010 ರಿಂದ 16–08–2010ರವರೆಗಿನ (ಎರಡೂ ದಿನಗಳು ಸೇರಿ) ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 8(15)(ಎಫ್) ಪ್ರಕಾರ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಶ್ರೀನಿವಾಸ್,
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಹಕಾರಿ ಸಕ್ಕರೆ)

ಪಿ.ಆರ್. 1432

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 444 ಸಅಸೇ 2010, ಬೆಂಗಳೂರು, ದಿನಾಂಕ: 09ನೇ ಸೆಪ್ಟೆಂಬರ್, 2010

2011ನೇ ಸಾಲಿನಲ್ಲಿ 60 ವರ್ಷಗಳ ವಯೋಮಿತಿಯನ್ನು ಪೂರ್ಣಗೊಳಿಸಲಿರುವ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ಈ ಕೆಳಕಂಡ ಅಧಿಕಾರಿಗಳು ಅವರುಗಳ ಹೆಸರುಗಳ ಮುಂದೆ ಸೂಚಿಸಿರುವ ದಿನಾಂಕಗಳಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿಯನ್ನು ಹೊಂದಲಿದ್ದಾರೆ.

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು, ಪದನಾಮ ಮತ್ತು ಕಾರ್ಯ ನಿರ್ವಹಿಸುತ್ತಿರುವ ಇಲಾಖೆ ಶ್ರೀ/ಶ್ರೀಮತಿ	ಜನ್ಮ ದಿನಾಂಕ	ವಯೋ ನಿವೃತ್ತಿ ಹೊಂದಲಿರುವ ದಿನಾಂಕ
1	**2**	**3**	**4**
	ಜನವರಿ		
1	**ಹೆಚ್. ಗಣೇಶಮೂರ್ತಿ,** ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ	02–01–1951	31–01–2011
2	**ಕೆ. ಜಿ. ಅನಂತ,** ಅಧೀನ ಕಾರ್ಯದರ್ಶಿ, ಸಿ.ಆ.ಸು.ಇ. (ಸೇವೆಗಳು–1)	10–01–1951	31–01–2011
3	**ಎಂ. ವಿ. ಕೃಷ್ಣಮೂರ್ತಿ,** ಅಧೀನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ	10–01–1951	31–01–2011
4	**ಎಂ.ಪಿ. ಗೋವಿಂದರಾಜು,** ಅಧೀನ ಕಾರ್ಯದರ್ಶಿ, ರಾಜ್ಯಪಾಲರ ಸಚಿವಾಲಯ	15–01–1951	31–01–2011
	ಫೆಬ್ರವರಿ		
5	**ಹೆಚ್.ಹೆಚ್. ಸೇಠ್,** ಅಪರ ಕಾರ್ಯದರ್ಶಿ, ನಿಯೋಜನೆ ಮೇಲೆ ಕರ್ನಾಟಕ ಭವನ, ನವದೆಹಲಿ	03–02–1951	28–02–2011
6	**ಪಾರ್ವತಿ ಕೇಶವಾಚಾರ್,** ಉಪ ಕಾರ್ಯದರ್ಶಿ, ಇಂಧನ ಇಲಾಖೆ	08–02–1951	28–02–2011

1	2	3	4
7	**ಕೆ.ಎಸ್. ನವನೀತನ್,** ಆಂತರಿಕ ಆರ್ಥಿಕ ಸಲಹೆಗಾರರು, ಕಂದಾಯ ಇಲಾಖೆ	09–02–1951	28–02–2011
8	**ಎಂ.ಪಿ. ರೂಪನಾರಾಯಣ,** ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	27–02–1951	28–02–2011
9	**ಪಿ. ಸಂಪತ್‌ಕುಮಾರ್,** ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ (ಕಾನೂನು ಕೋಶ)	27–02–1951	28–02–2011
	ಮಾರ್ಚ್		
	ಏಪ್ರಿಲ್		
10	**ಎಂ.ಕೆ. ನರಸಿಂಹಲು,** ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ	03–04–1951	30–04–2011
11	**ಸಿ.ಎಂ. ಹೂಗಾರ್,** ಉಪ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ	28–04–1951	30–04–2011
12	**ಎಸ್.ಕೆ. ತೆಗ್ಗಿನಮನಿ,** ಉಪ ಕಾರ್ಯದರ್ಶಿ, ಕನ್ನಡ, ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ	01–05–1951	30–04–2011
	ಮೇ		
13	**ಬಿ.ಜಿ. ಕೃಷ್ಣಮೂರ್ತಿ,** ಅಪರ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ಸೇವಾ ನಿಯಮಗಳು)	17–05–1951	31–05–2011
14	**ಕೆ.ಆರ್. ವಲ್ಲೂರ್,** ಅಧೀನ ಕಾರ್ಯದರ್ಶಿ, ವಸತಿ ಇಲಾಖೆ	28–05–1951	31–05–2011
15	**ಎಂಎಸ್. ದೇಸಾಯಿ,** ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ಸೇವೆಗಳು)	01–06–1951	31–05–2011
	ಜೂನ್		
16	**ಎಲ್. ಸುಶೀಲಮ್ಮ,** ಅಧೀನ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ಆಡಳಿತ ಸುಧಾರಣೆ)	12–06–1951	30–06–2011
17	**ಹೆಚ್. ಹನುಮಂತಯ್ಯ,** ಅಧೀನ ಕಾರ್ಯದರ್ಶಿ, ವಸತಿ ಇಲಾಖೆ	15–06–1951	30–06–2011
18	**ಜಿ. ರಾಮಚಂದ್ರಯ್ಯ,** ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ	15–06–1951	30–06–2011
19	**ಹೆಚ್. ಶೇಖರಪ್ಪ,** ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಇ–ಪ್ರೊಕ್ಯೂರ್‌ಮೆಂಟ್)	01–07–1951	30–06–2011
	ಜುಲೈ		
20	**ಜಾಯ್ಸ್ ಸುರೇಂದ್ರ,** ಜಂಟಿ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ಆಡಳಿತ)	06–07–1951	31–07–2011
21	**ಎನ್. ಟಿ. ನಾಯಕ್,** ಜಂಟಿ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ	01–08–1951	31–07–2011
	ಆಗಸ್ಟ್		
22	ಇ. **ಈಶ್ವರ ನಾಯಕ್,** ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ	28–08–1951	31–08–2011
	ಸೆಪ್ಟೆಂಬರ್		
23	**ಸೈಯದ್ ಅಬ್ದುಲ್ ನಜೀರ್,** ಅಧೀನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ	08–09–1951	30–09–2011
24	**ಚೋಮಾ ನಾಯಕ್,** ಉಪ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಕಾನೂನು ಕೋಶ)	10–09–1951	30–09–2011
25	**ಲಕ್ಷ್ಮೀನರಸಿಂಹಯ್ಯ,** ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು)	28–09–1951	30–09–2011
	ಅಕ್ಟೋಬರ್		
26	**ಕೆ.ಹೆಚ್. ಶೇಷಗಿರಿ,** ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	27–10–1951	31–10–2011
	ನವೆಂಬರ್		

1	2	3	4
	ಡಿಸೆಂಬರ್		
27	**ಬಿ.ವಿ. ಕುಮಾರಸ್ವಾಮಿ,** ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	08–12–1951	31–12–2011
28	**ಗೀತಾ ರಮೇಶ್,** ಉಪ ಕಾರ್ಯದರ್ಶಿ, ಕಂದಾಯ ಇಲಾಖೆ	01–01–1952	31–12–2011

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು–3)

ಪಿ.ಆರ್. 1433

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಾಕೈ 54 ರೇಉನಿ 2010, ಬೆಂಗಳೂರು, ದಿನಾಂಕ: 16ನೇ ಸೆಪ್ಟೆಂಬರ್, 2010

ಅಧಿಸೂಚನೆ ಸಂಖ್ಯೆ : ಡಿಪಿಎಆರ್ 544 ಎಸ್‌ಎಎಸ್ 2010, ದಿನಾಂಕ : 06–09–2010ರಲ್ಲಿ ಶ್ರೀ ಡಿ.ಕೆ. ರಂಗಸ್ವಾಮಿ, ಭಾಅಸೇ., ಇವರನ್ನು ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡುವುದಕ್ಕಾಗಿ ಇವರ ಸೇವೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಶಕ್ಕೆ ನೀಡಲಾಗಿದೆ. ಅದರಂತೆ ಶ್ರೀ ಡಿ.ಕೆ. ರಂಗಸ್ವಾಮಿ, ಭಾಅಸೇ., ಇವರನ್ನು ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಶ್ರೀ ಎಂ.ಕೆ. ಬಲದೇವಕೃಷ್ಣ, ಭಾಅಸೇ., ಇವರ ಸ್ಥಾನದಲ್ಲಿ ಮರು ಸ್ಥಳ ನಿಯುಕ್ತಿಗೊಳಿಸಿ, ಈ ಕೂಡಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಭಾರತಿ ಆರ್. ನಾಯಕ್,
ಪೀಠಾಧಿಕಾರಿ (ರೇಷ್ಮೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್. 1434

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 298 ಎಲ್‌ಇಟಿ 2010, ಬೆಂಗಳೂರು, ದಿನಾಂಕ: 20ನೇ ಸೆಪ್ಟೆಂಬರ್, 2010

ಕಾರ್ಮಿಕ ಇಲಾಖೆಯ ಶ್ರೀ ಎ.ಹೆಚ್. ಉಮೇಶ್, ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಯದರ್ಶಿ, ಕನಿಷ್ಠ ವೇತನ ಸಲಹಾ ಮಂಡಳಿ, ಬೆಂಗಳೂರು, ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಈ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮೈಸೂರು ವಿಭಾಗದಲ್ಲಿ ಶ್ರೀ ಎಸ್.ಎಸ್. ಶರೀಫ್, ಇವರ ಅಮಾನತ್ತಿನಿಂದ ಖಾಲಿ ಇರುವ ಸಹಾಯಕ ಕಾರ್ಮಿಕ ಆಯುಕ್ತರ ಹುದ್ದೆಗೆ ವರ್ಗಾವಣೆ ಮಾಡಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಯು. ಎನ್. ನಾಗೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ

ಪಿ.ಆರ್. 1435

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 121 ಸೇಇಮು 2010, ಬೆಂಗಳೂರು, ದಿನಾಂಕ: 31ನೇ ಆಗಸ್ಟ್, 2010

ಶ್ರೀಮತಿ ಉಷಾ ಸುರೇಶ್, ನಿರ್ದೇಶಕರು, ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು ಇವರು ದಿನಾಂಕ : 31–07–2010ರಂದು 60 ವರ್ಷಗಳ ವಯೋಮಿತಿ ತಲುಪಿ ನಿವೃತ್ತಿ ಹೊಂದಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ : ಆಇ 15 ಎಸ್‌ಆರ್‌ಎಸ್ 97, ದಿನಾಂಕ : 20–09–1997ರನ್ವಯ ನಿವೃತ್ತಿ ದಿನಾಂಕದವರೆಗೆ ಅವರ ಹಕ್ಕಿನಲ್ಲಿರುವ ಗಳಿಕೆ ರಜೆಯನ್ನು 240 ದಿನಗಳ ಗರಿಷ್ಠ ಮಿತಿಗೊಳಪಟ್ಟು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 118–ಎ (1)ರಡಿ ಹಾಗೂ ಉಪನಿಯಮ (4)ರ ವ್ಯಾಪ್ತಿಗೊಳಪಟ್ಟು ನಗಧೀಕರಣಗೊಳಿಸಲು ಮಂಜೂರಾತಿ ನೀಡಿದೆ. ಸದರಿ ಅಧಿಕಾರಿಯ ವಿರುದ್ಧ ಯಾವುದೇ ಇಲಾಖಾ ವಿಚಾರಣೆ/ಶಿಸ್ತು ಕ್ರಮ/ಕ್ರಿಮಿನಲ್ ಮೊಕದ್ದಮೆ ಬಾಕಿ ಇರುವುದಿಲ್ಲ ಹಾಗೂ ಹೂಡುವ ಸಂಭವವಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು–3)

ಪಿ.ಆರ್. 1436

ಕಾರ್ಮಿಕ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಕಾಇ 333 ಎಲ್‌ಎಸ್‌ಐ 2010, ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್, 2010

ಡಾ॥ ವಿ. ಪುಷ್ಪಲತಾ, ಹಿರಿಯ ವಿಮಾ ವೈದ್ಯಾಧಿಕಾರಿ, ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯ, ಮುನಿರೆಡ್ಡಿಪಾಳ್ಯ, ಇವರಿಗೆ ಸರ್ಕಾರಿ ಅಧಿಸೂಚನೆ ಸಂಖ್ಯೆ : ಕಾಇ 8 ಎಲ್‌ಎಸ್‌ಐ 2008, ದಿನಾಂಕ : 05–12–2008ರ ಮೂಲಕ ಕಾಲಬದ್ಧ ಪದೋನ್ನತಿ ಮಂಜೂರು ಮಾಡಿದ ಆದೇಶದ 1997ನೇ ಸಾಲಿನಲ್ಲಿ ನೇಮಕಾತಿ ಹೊಂದಿದ ವೈದ್ಯರ ಪಟ್ಟಿಯಲ್ಲಿ ಕ್ರಮ ಸಂಖ್ಯೆ –19, ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ 164ರಲ್ಲಿ ಸೇವೆಗೆ ಸೇರಿದ ದಿನಾಂಕ : 26–04–1997 ಎಂದು ಇರುವುದನ್ನು ದಿನಾಂಕ : 26–11–1997 ಎಂದು ಓದಿಕೊಳ್ಳತಕ್ಕದ್ದು ಹಾಗೂ ತಿದ್ದೋಲೆ ಸಂಖ್ಯೆ : ಕಾಇ 182 ಎಲ್‌ಎಸ್‌ಐ 2010, ದಿನಾಂಕ 29–05–2010ನ್ನು ರದ್ದುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಗೋವಿಂದಸ್ವಾಮಿ,
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ.
(ಕಾರಾವಿ ಯೋ (ವೈ) ಸೇವೆಗಳು)

ಪಿ.ಆರ್. 1437

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 38 ಆಸೇನಿ 2010, ಬೆಂಗಳೂರು, ದಿನಾಂಕ: 15ನೇ ಸೆಪ್ಟೆಂಬರ್, 2010

ಶ್ರೀ ಎಂ.ಎಸ್. ಚನ್ನಪ್ಪಗೌಡರ್, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್), ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಜಿಲ್ಲೆ, ಇವರು ದಿನಾಂಕ : 30–09–2010ರಂದು ವಯೋಮಿತಿಯ ಮೇರೆಗೆ ನಿವೃತ್ತಿ ಹೊಂದಲಿರುವುದರಿಂದ, ಸದರಿ ಹುದ್ದೆಗೆ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಇವರನ್ನು ಹೆಚ್ಚುವರಿ ಪ್ರಭಾರದಲ್ಲಿಟ್ಟು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಜಿ. ಅನಂತ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು–2)

ಪಿ.ಆರ್. 1438

ಅಧಿಸೂಚನೆ

ಸಂಖ್ಯೆ: ಸಿಆಸುಇ 197 ಸೇಲೋಯು 2010, ಬೆಂಗಳೂರು, ದಿನಾಂಕ: 16ನೇ ಸೆಪ್ಟೆಂಬರ್, 2010

ಶ್ರೀ ಕೆ.ಆರ್. ನಾರಾಯಣರಾವ್, ಸಹಾಯಕ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಲೋಕಾಯುಕ್ತ ಕಛೇರಿ, ಬೆಂಗಳೂರು ಇಲ್ಲಿ ಖಾಲಿಯಿರುವ ವೇತನ ಶ್ರೇಣಿ ರೂ. 20025–525–22650–600–26250–675–28275 ರಲ್ಲಿನ ಉಪನಿಬಂಧಕ (ಆಡಳಿತ) ಹುದ್ದೆಗೆ ಸ್ಥಾನಾಪನ್ನ ಬಡ್ತಿ ನೀಡಿ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ಮಾರ್ಕಂಡೇಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವಾ ನಿಯಮಗಳು–2)

ಪಿ.ಆರ್. 1439

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 285 ಪಿಪಿಇ 2010, ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್, 2010

ಈ ಕೆಳಕಂಡ ತಃಖ್ತೆಯ ಅಂಕಣ(2)ರಲ್ಲಿ ನಮೂದಿಸಿರುವ ನ್ಯಾಯಾಲಯಗಳಲ್ಲಿ ತಃಖ್ತೆಯ ಅಂಕಣ (3) ಮತ್ತು (4)ರಲ್ಲಿ ನಮೂದಿಸಿರುವ ಪ್ರಕರಣ ಮತ್ತು ಪ್ರತಿ ಪ್ರಕರಣಗಳು ದಾಖಲಾಗಿರುತ್ತವೆ. ಆದ ಕಾರಣ ಅಂಕಣ (4)ರಲ್ಲಿ ನಮೂದಿಸಿರುವ ಪ್ರತಿ ಪ್ರಕರಣಗಳಲ್ಲಿ ಸರ್ಕಾರದ ಪರವಾಗಿ ಹಾಜರಾಗಲು ಮತ್ತು ಪ್ರಕರಣವನ್ನು ನಡೆಸಲು ಅಂಕಣ (5)ರಲ್ಲಿ ನಮೂದಿಸಿರುವ ಅಭಿಯೋಜಕರನ್ನು ವಿಶೇಷ ಸರ್ಕಾರಿ ಅಭಿಯೋಜಕರಾಗಿ ನೇಮಿಸಿದೆ.

ಕ್ರ. ಸಂ.	ನ್ಯಾಯಾಲಯದ ಹೆಸರು ಮತ್ತು ಸ್ಥಳ	ಪ್ರಕರಣ ಸಂಖ್ಯೆ : Sc/cc/Spl.cc	ಪ್ರತಿ ಪ್ರಕರಣ ಸಂಖ್ಯೆ Sc/cc/Spl.cc	ಪ್ರತಿ ಪ್ರಕರಣದಲ್ಲಿ ಹಾಜರಾಗಿ ಪ್ರಕರಣವನ್ನು ನಡೆಸಲು ಪ್ರಸ್ತಾಪಿಸಿರುವ ಅಭಿಯೋಜಕರು ಮತ್ತು ಸ್ಥಳ
01	02	03	04	05
1	ಜೆಎಂಎಫ್‌ಸಿ ನ್ಯಾಯಾಲಯ, ಲಕ್ಷ್ಮೇಶ್ವರ	ಸಿಸಿ. 137/09	ಸಿಸಿ. 138/09	ಸಹಾಯಕ ಅಭಿಯೋಗ ನಿರ್ದೇಶಕರು, ಎಸ್.ಪಿ. ಕಛೇರಿ, ಗದಗ
		ಸಿಸಿ. 49/10	ಸಿಸಿ. 71/09	
		ಸಿಸಿ. 145/09	ಸಿಸಿ. 161/09	
		ಸಿಸಿ. 230/09	ಸಿಸಿ. 248/09	
		ಸಿಸಿ. 199/09	ಸಿಸಿ. 181/09	
		ಸಿಸಿ. 217/09	ಸಿಸಿ. 200/09	

01	02	03	04	05
2	ಜೆಎಂಎಫ್‌ಸಿ ನ್ಯಾಯಾಲಯ, ಸಂಕೇಶ್ವರ	ಸಿಸಿ. 52/09 ಸಿಸಿ. 338/09	ಸಿಸಿ. 53/09 ಸಿಸಿ. 339/09	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಾಲಯ, ಹುಕ್ಕೇರಿ
3	2ನೇ ಅಪರ ಜಿಲ್ಲಾ ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ	ಸ್ಪೆ. ಕೇಸ್ 39/07	ಎಸ್.ಸಿ. 116/10	ಪ್ರಧಾನ ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ
4	1ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯ, ಮೈಸೂರು	ಎಸ್.ಸಿ. 4/09	ಎಸ್.ಸಿ. 58/07	ಪ್ರಧಾನ ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ಮೈಸೂರು
5	2ನೇ ಎಸಿಎಂಎಂ ನ್ಯಾಯಾಲಯ, ಬೆಂಗಳೂರು ನಗರ	ಸಿಸಿ. 25732/07	ಸಿಸಿ. 1648/08	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, 1ನೇ ಎಸಿಎಂಎಂ ನ್ಯಾಯಾಲಯ, ಬೆಂಗಳೂರು ನಗರ
6	2ನೇ ಜೆಎಂಎಫ್‌ಸಿ ನ್ಯಾಯಾಲಯ, ದಾವಣಗೆರೆ	ಸಿಸಿ. 318/09 ಸಿಸಿ. 375/10	ಸಿಸಿ. 355/09 ಸಿಸಿ. 1788/09	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆಎಂ ನ್ಯಾಯಾಲಯ, ದಾವಣಗೆರೆ
7	ಎಸಿಜೆ (ಕಿವಿ) ಜೆಎಂಎಫ್‌ಸಿ ನ್ಯಾಯಾಲಯ, ಕಾರ್ಕಳ	ಸಿಸಿ. 575/09	ಸಿಸಿ. 527/09	ಅಧಿಕ ಸಹಾಯಕ ಸರ್ಕಾರಿ ಅಭಿಯೋಜಕರು, ಅಧಿಕ ಜೆಎಂಎಫ್‌ಸಿ ನ್ಯಾಯಾಲಯ, ಕಾರ್ಕಳ
8	2ನೇ ಅಪರ ಜೆಎಂಎಫ್‌ಸಿ ನ್ಯಾಯಾಲಯ, ಚಿತ್ರದುರ್ಗ	ಸಿಸಿ. 729/09 ಸಿಸಿ. 2034/09 ಸಿಸಿ.1423/09	ಸಿಸಿ. 554/09 ಸಿಸಿ. 2035/09 ಸಿಸಿ. 1333/09	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆಎಂ ನ್ಯಾಯಾಲಯ, ಚಿತ್ರದುರ್ಗ
9	ಸಿಜೆ (ಕಿವಿ) ಜೆಎಂಎಫ್‌ಸಿ ನ್ಯಾಯಾಲಯ, ತುರುವೇಕೆರೆ	ಸಿಸಿ. 447/08 ಸಿಸಿ. 127/08	ಸಿಸಿ. 20/08 ಸಿಸಿ. 84/08	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಾಲಯ, ತಿಪಟೂರು
10	ಸಿಜೆ (ಹಿವಿ) ಸಿಜೆಎಂ ನ್ಯಾಯಾಲಯ, ಚಾಮರಾಜನಗರ	ಸಿಸಿ. 47/09	ಸಿಸಿ. 50/09	ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಗುಂಡ್ಲುಪೇಟೆ
11	ಅಧಿಕ ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚಾಮರಾಜನಗರ	ಸಿಸಿ. 587/06 ಸಿಸಿ. 593/06	ಸಿಸಿ. 588/06 ಸಿಸಿ. 594/06	ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಧಾನ ಸಿಜೆ (ಕಿವಿ) ಜೆಎಂಎಫ್‌ಸಿ ನ್ಯಾಯಾಲಯ, ಚಾಮರಾಜನಗರ
12	ಅಧಿಕ ಸಿಜೆ (ಕಿವಿ) ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು	ಸಿಸಿ. 527/09	ಸಿಸಿ. 744/09	ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಧಾನ ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು
13	2ನೇ ಅಪರ ಜಿಲ್ಲಾ ಸತ್ರ ನ್ಯಾಯಾಲಯ, ಧಾರವಾಡ	ಎಸ್‌ಸಿ. 63/10	ಎಸ್‌ಸಿ. 64/10	ಪ್ರಧಾನ ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ಧಾರವಾಡ
14	ಜೆಎಂಎಫ್‌ಸಿ ನ್ಯಾಯಾಲಯ, ಸಿಂಧನೂರು	ಸಿಸಿ. 574/08	ಸಿಸಿ. 582/08	ಅಧಿಕ ಸಹಾಯಕ ಸರ್ಕಾರಿ ಅಭಿಯೋಜಕರು, ಅಧಿಕ ಜೆಎಂಎಫ್‌ಸಿ ನ್ಯಾಯಾಲಯ, ಸಿಂಧನೂರು
15	ಸಿಜೆ (ಹಿವಿ) ಮತ್ತು ಅಪರ ಸಿಜೆಎಂ ನ್ಯಾಯಾಲಯ, ಹೊಳೆನರಸೀಪುರ	ಸಿಸಿ. 111/08	ಸಿಸಿ. 110/08	ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆ (ಕಿವಿ) ಜೆಎಂಎಫ್‌ಸಿ ನ್ಯಾಯಾಲಯ, ಹೊಳೆನರಸೀಪುರ
16	1ನೇ ಅಪರ ಜೆಎಂಎಫ್‌ಸಿ ನ್ಯಾಯಾಲಯ, ಗುಲ್ಬರ್ಗ	ಸಿಸಿ. 1324/09	ಸಿಸಿ. 1732/09	ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಧಾನ ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಗುಲ್ಬರ್ಗ
17	ವಿಶೇಷ ಜಿಲ್ಲಾ ಸತ್ರ ನ್ಯಾಯಾಲಯ, ರಾಯಚೂರು	ಸ್ಪೆಎಸ್‌ಸಿ. 13/09	ಎಸ್‌ಸಿ. 53/10	ಪ್ರಧಾನ ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ರಾಯಚೂರು
18	ಪ್ರಧಾನ ಸಿಜೆಎಂ ನ್ಯಾಯಾಲಯ, ರಾಯಚೂರು	ಸಿಸಿ. 4/10	ಸಿಸಿ. 5/10	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಾಲಯ, ರಾಯಚೂರು

01	02	03	04	05
19	3ನೇ ಅಪರ ಜೆಎಂಎಫ್‌ಸಿ ನ್ಯಾಯಾಲಯ, ಬೆಳಗಾವಿ	ಸಿಸಿ. 1508/09	ಸಿಸಿ. 1509/09	ಸಹಾಯಕ ಸರ್ಕಾರಿ ಅಭಿಯೋಜಕರು, 4ನೇ ಜೆಎಂಎಫ್‌ಸಿ ನ್ಯಾಯಾಲಯ, ಬೆಳಗಾವಿ
20	ಸಿಜೆ (ಕಿವಿ) ಜೆಎಂಎಫ್‌ಸಿ ನ್ಯಾಯಾಲಯ, ಆಲೂರು	ಸಿಸಿ. 47/10	ಸಿಸಿ. 347/09	ಸಹಾಯಕ ಸರ್ಕಾರಿ ಅಭಿಯೋಜಕರು, 1ನೇ ಅಧಿಕ ಸಿಜೆ (ಕಿವಿ) ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹಾಸನ
		ಸಿಸಿ. 5/09	ಸಿಸಿ. 57/09	
		ಸಿಸಿ. 255/09	ಸಿಸಿ. 97/09	
21	ಜೆಎಂಎಫ್‌ಸಿ ನ್ಯಾಯಾಲಯ, ಬಾದಾಮಿ	ಸಿಸಿ. 339/09	ಸಿಸಿ. 414/09	ಸಹಾಯಕ ಸರ್ಕಾರಿ ಅಭಿಯೋಜಕರು, 2ನೇ ಜೆಎಂಎಫ್‌ಸಿ ನ್ಯಾಯಾಲಯ, ಬಾಗಲಕೋಟೆ
		ಸಿಸಿ. 413/09	ಸಿಸಿ. 345/09	
		ಸಿಸಿ. 416/09	ಸಿಸಿ. 379/09	
		ಸಿಸಿ. 539/09	ಸಿಸಿ. 541/09	
		ಸಿಸಿ. 369/09	ಸಿಸಿ. 391/09	
		ಸಿಸಿ. 353/09	ಸಿಸಿ. 461/09	
22	ಜೆಎಂಎಫ್‌ಸಿ ನ್ಯಾಯಾಲಯ, ಚಿಕ್ಕಮಗಳೂರು	ಸಿಸಿ. 1156/05	ಸಿಸಿ. 1158/05	ಸಹಾಯಕ ಅಭಿಯೋಗ ನಿರ್ದೇಶಕರು, ಚಿಕ್ಕಮಗಳೂರು
23	1ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ, ಶಿರಸಿ	ಸಿಸಿ. 2693/09	ಸಿಸಿ. 2725/09	ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಶಿರಸಿ
24	1ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ, ಶಿರಸಿ	ಸಿಸಿ. 209/09	ಸಿಸಿ. 211/09	ಸಹಾಯಕ ಸರ್ಕಾರಿ ಅಭಿಯೋಜಕರು, ಪ್ರಧಾನ ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಶಿರಸಿ
25	1ನೇ ಅಪರ ಜಿಲ್ಲಾ ಸತ್ರ ನ್ಯಾಯಾಲಯ, ಬಳ್ಳಾರಿ	ವಿ.ಮೊ. 66/06	ಎಸ್‌ಸಿ. 128/07	ಪ್ರಧಾನ ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ಬಳ್ಳಾರಿ
		ವಿ.ಮೊ. 73/08	ಎಸ್‌ಸಿ. 91/09	
		ವಿ.ಮೊ. 44/06	ಎಸ್‌ಸಿ. 25/07	
		ವಿ.ಮೊ. 47/07	ಎಸ್‌ಸಿ. 10/08	
		ವಿ.ಮೊ. 68/06	ಎಸ್‌ಸಿ. 69/09	
		ವಿ.ಮೊ. 37/08	ಎಸ್‌ಸಿ. 105/08	
		ವಿ.ಮೊ. 15/09	ವಿ.ಮೊ. 33/09	
26	1ನೇ ಜೆಎಂಎಫ್‌ಸಿ ನ್ಯಾಯಾಲಯ, ಗದಗ	ಸಿ.ಸಿ. 136/10	ಸಿ.ಸಿ. 137/10	ಸಹಾಯಕ ಸರ್ಕಾರಿ ಅಭಿಯೋಜಕರು, 2ನೇ ಜೆಎಂಎಫ್‌ಸಿ ನ್ಯಾಯಾಲಯ, ಗದಗ
		ಸಿ.ಸಿ. 97/09	ಸಿ.ಸಿ. 98/09	
27	4ನೇ ಎ ಸಿಎಂಎಂ ನ್ಯಾಯಾಲಯ, ಬೆಂಗಳೂರು ನಗರ	ಸಿ.ಸಿ. 9264/09	ಸಿ.ಸಿ. 7422/09	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಿಎಂಎಂ ನ್ಯಾಯಾಲಯ, ಬೆಂಗಳೂರು ನಗರ
28	2ನೇ ಜೆಎಂಎಫ್‌ಸಿ ನ್ಯಾಯಾಲಯ, ದಾವಣಗೆರೆ	ಸಿ.ಸಿ. 1845/09	ಸಿ.ಸಿ. 22/10	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆಎಂ ನ್ಯಾಯಾಲಯ, ದಾವಣಗೆರೆ
		ಸಿ.ಸಿ. 1342/09	ಸಿ.ಸಿ. 1343/09	
29	2ನೇ ಜೆಎಂಎಫ್‌ಸಿ ನ್ಯಾಯಾಲಯ, ಚಿತ್ರದುರ್ಗ	ಸಿ.ಸಿ. 553/09	ಸಿ.ಸಿ. 1327/09	ಸಹಾಯಕ ಅಭಿಯೋಗ ನಿರ್ದೇಶಕರು, ಎಸ್.ಪಿ. ಕಛೇರಿ, ಚಿತ್ರದುರ್ಗ
30	ಜೆಎಂಎಫ್‌ಸಿ ನ್ಯಾಯಾಲಯ, ಪಿರಿಯಾಪಟ್ಟಣ	ಸಿ.ಸಿ. 630/08	ಸಿ.ಸಿ. 75/09	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಾಲಯ, ಹುಣಸೂರು
31	2ನೇ ಜೆಎಂಎಫ್‌ಸಿ ನ್ಯಾಯಾಲಯ, ಮೈಸೂರು	ಸಿ.ಸಿ. 211/09	ಸಿ.ಸಿ. 214/09	ಸಹಾಯಕ ಸರ್ಕಾರಿ ಅಭಿಯೋಜಕರು, 3ನೇ ಜೆಎಂಎಫ್‌ಸಿ ನ್ಯಾಯಾಲಯ, ಮೈಸೂರು
32	ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಗುಡಿಬಂಡೆ	ಸಿ.ಸಿ. 171/08	ಸಿ.ಸಿ. 51/09	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಾಲಯ, ಚಿಕ್ಕಬಳ್ಳಾಪುರ
33	ಜೆಎಂಎಫ್‌ಸಿ ನ್ಯಾಯಾಲಯ, ಬಾಗೇಪಲ್ಲಿ	ಸಿ.ಸಿ. 287/09	ಸಿ.ಸಿ. 153/10	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಾಲಯ, ಗುಡಿಬಂಡೆ
34	2ನೇ ಜೆಎಂಎಫ್‌ಸಿ ನ್ಯಾಯಾಲಯ, ರಾಯಚೂರು	ಸಿ.ಸಿ. 91/06	ಸಿ.ಸಿ. 92/06	ಸಹಾಯಕ ಸರ್ಕಾರಿ ಅಭಿಯೋಜಕರು, 3ನೇ ಜೆಎಂಎಫ್‌ಸಿ ನ್ಯಾಯಾಲಯ, ರಾಯಚೂರು

01	02	03	04	05
35	1ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯ, ವಿಜಾಪುರ	ಎಸ್.ಸಿ. 60/10	ಎಸ್.ಸಿ. 71/10	2ನೇ ಅಧಿಕ ಸರ್ಕಾರಿ ಅಭಿಯೋಜಕರು, 2ನೇ ಅಧಿಕ ಜಿಲ್ಲಾ ಸತ್ರ ನ್ಯಾಯಾಲಯ, ವಿಜಾಪುರ
36	ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ದಾವಣಗೆರೆ	ಎಸ್.ಸಿ. 61/09	ಎಸ್.ಸಿ. 22/10	ಪ್ರಧಾನ ಸರ್ಕಾರಿ ಅಭಿಯೋಜಕರು,ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ಚಿತ್ರದುರ್ಗ
37	ಜೆಎಂಎಫ್‌ಸಿ ನ್ಯಾಯಾಲಯ, ಶಿಡ್ಲಘಟ್ಟ	ಸಿ.ಸಿ. 8/08	ಸಿ.ಸಿ. 39/08	ಸಹಾಯಕ ಸರ್ಕಾರಿ ಅಭಿಯೋಜಕರು, ಜೆಎಂಎಫ್‌ಸಿ ನ್ಯಾಯಲಯ, ಚಿಂತಾಮಣಿ
38	ವಿಶೇಷ ಸತ್ರ ನ್ಯಾಯಾಲಯ, ಗುಲ್ಬರ್ಗ	ಸ್ಪೆಕೇಸ್ 20/09	ಎಸ್.ಸಿ. 303/09	4ನೇ ಅಪರ ಸರ್ಕಾರಿ ಅಭಿಯೋಜಕರು, 4ನೇ ಅಪರ ಜಿಲ್ಲಾ ಸತ್ರ ನ್ಯಾಯಾಲಯ, ಗುಲ್ಬರ್ಗ
39	ಜಿಲ್ಲಾ ಸತ್ರ ನ್ಯಾಯಾಲಯ, ಬಾಗಲಕೋಟೆ	ಸ್ಪೆಕೇಸ್ 81/09	ಎಸ್.ಸಿ. 146/09	ಸರ್ಕಾರಿ ಅಭಿಯೋಜಕರು, ತ್ವರಿತ ವಿಲೇವಾರಿ ನ್ಯಾಯಾಲಯ, ಜಮಖಂಡಿ
40	3ನೇ ಅಪರ ಜಿಲ್ಲಾ ಮತ್ತು ವಿಶೇಷ ಸತ್ರ ನ್ಯಾಯಾಲಯ, ತುಮಕೂರು	ಸ್ಪೆಕೇಸ್ 259/08	ಎಸ್.ಸಿ. 110/10	1ನೇ ಅಪರ ಸರ್ಕಾರಿ ಅಭಿಯೋಜಕರು, 1ನೇ ಅಪರ ಜಿಲ್ಲಾ ಸತ್ರ ನ್ಯಾಯಾಲಯ, ತುಮಕೂರು
41	ಜೆಎಂಎಫ್‌ಸಿ ನ್ಯಾಯಾಲಯ, ಹರಿಹರ	ಸಿ.ಸಿ. 748/09	ಸಿ.ಸಿ. 839/09	ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಿಜೆಎಂ ನ್ಯಾಯಾಲಯ, ದಾವಣಗೆರೆ
42	ಜೆಎಂಎಫ್‌ಸಿ ನ್ಯಾಯಾಲಯ, ಹೊಸದುರ್ಗ	ಸಿ.ಸಿ. 93/09	ಸಿ.ಸಿ. 132/09	ಸಹಾಯಕ ಅಭಿಯೋಗ ನಿರ್ದೇಶಕರು, ಎಸ್.ಪಿ. ಕಛೇರಿ, ಚಿತ್ರದುರ್ಗ
43	ಸಿಜೆಎಂ ನ್ಯಾಯಾಲಯ, ಕೊಪ್ಪಳ	ಸಿ.ಸಿ. 220/09	ಸಿ.ಸಿ. 222/09	ಸಹಾಯಕ ಅಭಿಯೋಗ ನಿರ್ದೇಶಕರು, ಎಸ್.ಪಿ. ಕಛೇರಿ, ಕೊಪ್ಪಳ
44	ತ್ವರಿತ ವಿಲೇವಾರಿ ನ್ಯಾಯಾಲಯ, ರಾಮನಗರ	ಎಸ್.ಸಿ. 339/06	ಸಿ.ಸಿ. 3/08	ಪ್ರಧಾನ ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ರಾಮನಗರ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ. ಸಿದ್ದಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ,

(ಕಾ ಮತ್ತು ಸು ಕಾಫಿಪೋಸ ಮತ್ತು ಅಭಿಯೋಗ)

ಪಿ.ಆರ್. 1440

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆರ್‌ಡಿ 62 ಎಟಿಎಸ್ 2010, ಬೆಂಗಳೂರು, ದಿನಾಂಕ: 4ನೇ ಸೆಪ್ಟೆಂಬರ್, 2010

ಶ್ರೀ. ಕೆ.ಎನ್. ಪ್ರವೀಣ್ ಕುಮಾರ್, ತಹಶೀಲ್ದಾರ್, ಸ್ಥಳ ನಿರೀಕ್ಷಣೆಯಲ್ಲಿರುವ ಇವರನ್ನು ಸಾರ್ವಜನಿಕ ಹಾಗೂ ಆಡಳಿತದ ಹಿತದೃಷ್ಟಿಯಿಂದ ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಮಗಳೂರು ಇಲ್ಲಿ ಖಾಲಿ ಇರುವ ಚುನಾವಣಾ ತಹಶೀಲ್ದಾರ್ ಹುದ್ದೆಗೆ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವರ್ಗಾಯಿಸಿ ನೇಮಿಸಲಾಗಿದೆ.

ಶ್ರೀಯುತರು ವರ್ಗಾಯಿಸಲಾದ ಸ್ಥಳದಲ್ಲಿ ತಕ್ಷಣವೇ ಹಾಜರಾಗಿ ವರದಿ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಸಸಾಲಟ್ಟಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ(ಸೇವೆಗಳು–3)

ಪಿ.ಆರ್. 1441

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 169 ಪಿಪಿಇ 2010, ಬೆಂಗಳೂರು, ದಿನಾಂಕ: 21ನೇ ಸೆಪ್ಟೆಂಬರ್, 2010

ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಈ ಕೆಳಕಂಡ ತಃಖ್ತೆಯ ಅಂಕಣ (2)ರಲ್ಲಿ ನಮೂದಿಸಿರುವ ಸರ್ಕಾರಿ ಅಭಿಯೋಜಕರ ಅಭಿಯೋಗ ಉಪನಿರ್ದೇಶಕರುಗಳನ್ನು ಅವರ ಕೋರಿಕೆ ಮೇರೆಗೆ ಅಂಕಣ (3)ರಲ್ಲಿ ನಮೂದಿಸಿರುವ ಸ್ಥಳಗಳಿಗೆ ಮುಂದಿನ ಆದೇಶದವರೆಗೆ ವರ್ಗಾಯಿಸಲಾಗಿದೆ.

ಕ್ರ.ಸಂ	ಅಧಿಕಾರಿಯ ಹೆಸರು ಮತ್ತು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ವರ್ಗಾವಣೆ ಮಾಡಲಾಗಿರುವ ಸ್ಥಳ
1	2	3
(1)	ಶ್ರೀಮತಿ ಲಲಿತಾ ಬಿ. ಸಂಗಣ್ಣವರ್, ಅಭಿಯೋಗ ಉಪನಿರ್ದೇಶಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು (ನಿಯೋಜನೆ ಮೇರೆಗೆ)	ಈ ಕೂಡಲೇ ಜಾರಿಗೆ ಬರುವಂತೆ ಇವರ ನಿಯೋಜನೆಯನ್ನು ಹಿಂದಕ್ಕೆ ಪಡೆದು, ಅಭಿಯೋಗ ಉಪ ನಿರ್ದೇಶಕರು, ದಾವಣಗೆರೆ ವಲಯ, ದಾವಣಗೆರೆ ಇಲ್ಲಿ ಖಾಲಿ ಇರುವ ಹುದ್ದೆಗೆ
(2)	ಶ್ರೀ ಎಸ್.ಎಸ್. ಚಾಂದಕವಟೆ, ಸರ್ಕಾರಿ ಅಭಿಯೋಜಕರು, ವಿಶೇಷ ನ್ಯಾಯಾಲಯ, (ಎಸ್.ಸಿ/ಎಸ್.ಟಿ), ರಾಯಚೂರು	ಸರ್ಕಾರಿ ಅಭಿಯೋಜಕರು, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗುಲ್ಬರ್ಗ (ಶ್ರೀ ಎಲ್.ಬಿ.ಚಟ್ನಾಳ್‌ಕರ್ ಇವರ ವಯೋನಿವೃತ್ತಿ ದಿನಾಂಕ 31–10–2010ರಂದು ತೆರವಾಗುವ ಹುದ್ದೆಗೆ, ದಿನಾಂಕ 01–11–2010ರಿಂದ ಜಾರಿಗೆ ಬರುವಂತೆ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸಿ.ಸಿದ್ದಪ್ಪ.

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ

ಪಿ.ಆರ್. 1442 (ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 126 ಎಲ್‌ಸಿಇ 2010, ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್, 2010

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತು) ನಿಯಮಗಳು 1977ರ ನಿಯಮ 26(3) ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ವಿಶೇಷ ಸರ್ಕಾರಿ ಅಭಿಯೋಜಕರುಗಳನ್ನು ದಿನಾಂಕ: 13–8–2010ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಶೇಷ ಸರ್ಕಾರಿ ಅಭಿಯೋಜಕರಾಗಿ ಮುಂದುವರಿಸಲಾಗಿದೆ.

ಶ್ರೀ ಬಿ. ನಾರಾಯಣ ರೆಡ್ಡಿ, ಬೆಂಗಳೂರು ನಗರದ 11ನೇ ತ್ವರಿತಗತಿ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರಾಗಿ ಮುಂದುವರೆಸಲಾಗಿದೆ.

ಶ್ರೀ ಹೆಚ್.ವೈ. ಉಮೇಶ್, ಬೆಂಗಳೂರು ನಗರದ 13ನೇ ತ್ವರಿತಗತಿ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರಾಗಿ ಮುಂದುವರೆಸಲಾಗಿದೆ.

ಶ್ರೀ ಎಸ್.ಪಿ. ಶಶಿಧರ, ಬೆಂಗಳೂರು ನಗರದ 14ನೇ ತ್ವರಿತಗತಿ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರಾಗಿ ಮುಂದುವರೆಸಲಾಗಿದೆ.

ಶ್ರೀ ಗಣಪತಿ ಪ್ರಸನ್ನ, ಬೆಂಗಳೂರು ನಗರದ 17ನೇ ತ್ವರಿತಗತಿ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರಾಗಿ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ನಾ. ಮಹಾಲಕ್ಷ್ಮಮ್ಮ,

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)

ಪಿ.ಆರ್. 1443 ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಅಧಿಸೂಚನೆ

ಸಂಖ್ಯೆ: ಲಾ 102 ಎಲ್‌ಎಜಿ 2010, ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್, 2010

ಶ್ರೀ ಎಸ್.ಎಲ್. ರಮೇಶ್‌ಬಾಬು, ವಕೀಲರು ಇವರನ್ನು ಮಂಡ್ಯ ಜಿಲ್ಲೆಯ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಯಲ್ಲಿ ಎರಡನೇ ಬಾರಿಗೆ ಮುಂದುವರೆಸಿ ಹೊರಡಿಸಿರುವ ಸರ್ಕಾರಿ ಅಧಿಸೂಚನೆಯ ಸಂಖ್ಯೆ: ಲಾ 102 ಎಲ್‌ಎಜಿ 2010, ದಿನಾಂಕ: 24–08–2010ನ್ನು ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ನಾ. ಮಹಾಲಕ್ಷ್ಮಮ್ಮ,

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1),

ಪಿ.ಆರ್. 1444 ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 210 ಆಸೇವ 2010, ಬೆಂಗಳೂರು, ದಿನಾಂಕ: 14ನೇ ಸೆಪ್ಟೆಂಬರ್, 2010

ಕಂದಾಯ ಇಲಾಖೆಯ ಅಧಿಸೂಚನೆ ಸಂಖ್ಯೆ: RD 43 AQB 2006, ದಿನಾಂಕ: 15–06–2007 ರನ್ವಯ ಸಹಾಯಕ ಆಯುಕ್ತರು (ಆಸ್ತಿಗಳು) ರವರು ಪಾಲಿಕೆಯಲ್ಲಿ ಭೂಸ್ವಾಧೀನ ಕಾಯ್ದೆಯ ಕಲಂ(5–ಎ)ರ ಅಡಿಯಲ್ಲಿ ಜಿಲ್ಲಾಧಿಕಾರಿಗಳು ನಿರ್ವಹಿಸಬೇಕಾದ ಕೆಲಸಗಳನ್ನು

ನಿರ್ವಹಿಸುವುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 141 ಎಂಎಲ್ಆರ್ 2006, ದಿನಾಂಕ: 09-03-2007ರಲ್ಲಿ ಕೆ.ಎ.ಎಸ್ (ಕಿ.ಶ್ರೇ) ವೃಂದದಲ್ಲಿ ಮಂಜೂರಾಗಿರುವ 8 ಸಹಾಯಕ ಆಯುಕ್ತರ ಹುದ್ದೆಗಳ ಪೈಕಿ ಒಂದು ಕೆ.ಎ.ಎಸ್ (ಕಿ.ಶ್ರೇ) ಹುದ್ದೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿ, ಬಿ.ಬಿ.ಎಂ.ಪಿ ಹುದ್ದೆಯಾಗಿ ಪರಿವರ್ತಿಸಿದನ್ವಯ ಪ್ರಸ್ತುತ ಸಹಾಯಕ ಆಯುಕ್ತರು, ಬಿ.ಬಿ.ಎಂ.ಪಿ (ಆಸ್ತಿಗಳು) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಕೆ. ಜ್ಯೋತಿ, ಕೆ.ಎ.ಎಸ್ (ಕಿರಿಯ ಶ್ರೇಣಿ) ಇವರನ್ನು ವಿಶೇಷ ಭೂಸ್ವಾಧೀನಾಧಿಕಾರಿ, ಬಿ.ಬಿ.ಎಂ.ಪಿ, ಬೆಂಗಳೂರು ಎಂದು ನೇಮಿಸಿ ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶದಲ್ಲಿಯೇ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವಾಸುದೇವಮೂರ್ತಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿ.ಆ.ಸು.ಇ (ಸೇವೆಗಳು-2)

ಪಿ.ಆರ್. 1445

ಅಧಿಸೂಚನೆ

ಸಂಖ್ಯೆ: ಸಿಆಸುಇ 250 ಆಸೇಇ 2010, ಬೆಂಗಳೂರು, ದಿನಾಂಕ: 15ನೇ ಸೆಪ್ಟೆಂಬರ್, 2010

ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು 1997ರ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಗೊಂಡ ಕೆಳಕಂಡ 2008ನೇ ತಂಡದ ಕೆ.ಎ.ಎಸ್ ಕಿರಿಯ ಶ್ರೇಣಿ ಪರೀಕ್ಷಾರ್ಥಿಗಳಿಗೆ ಅಧಿಸೂಚನೆ ಸಂಖ್ಯೆ:ಸಿಆಸುಇ 83 ಆಸೇವ 2010, ದಿನಾಂಕ: 29-07-2010ರಲ್ಲಿ ನೇಮಕಾತಿ ಆದೇಶ ನೀಡಿದ್ದು, ಈ ಅಭ್ಯರ್ಥಿಗಳಿಗೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಜಿಲ್ಲೆಗಳನ್ನು ಹಂಚಿಕೆ ಮಾಡಲಾಗಿದ್ದು, ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವ ತರಬೇತಿಯನ್ನು ಆಯಾ ಜಿಲ್ಲೆಗಳಲ್ಲಿ ಪಡೆಯಲು ಸೂಚಿಸಲಾಗಿದೆ.

ಕ್ರ.ಸ.	ಅಧಿಕಾರಿಯ ಹೆಸರು ಶ್ರೀ/ಶ್ರೀಮತಿ	ತರಬೇತಿಗೆ ನಿಯೋಜಿಸಲ್ಪಟ್ಟಿರುವ ಜಿಲ್ಲೆಯ ಹೆಸರು
1	ವಿಜಯ್ ಬಿ.ಪಿ.	ದಕ್ಷಿಣ ಕನ್ನಡ ಜಿಲ್ಲೆ
2	ಶ್ರೀಹರ್ಷ ಎಸ್.ಶೆಟ್ಟಿ	ಶಿವಮೊಗ್ಗ
3	ಸ್ನೇಹ. ಸಿ.ವಿ	ಚಿತ್ರದುರ್ಗ
4	ಅಶೋಕ. ಡಿ.ಆರ್	ಬಳ್ಳಾರಿ
5	ಐಷಾ ಪರ್‌ವೀನ್	ಹಾಸನ
6	ಪ್ರಶಾಂತ. ಆರ್.	ಚಿಕ್ಕಮಗಳೂರು
7	ನಾಗರಾಜು. ಎಸ್.	ಬಾಗಲಕೋಟೆ
8	ಇಸಲಾವುದ್ದೀನ್	ಧಾರವಾಡ
9	ರುದ್ರೇಶ. ಎಸ್.ಗಾಳಿ	ಕಾರವಾರ
10	ಅಶೋಕ ದುಡಗುಂಠಿ	ಬಿಜಾಪುರ
11	ಸಿದ್ದಲಿಂಗಯ್ಯ, ಎಸ್.ಹಿರೇಮಠ	ರಾಯಚೂರು
12	ಜಗದೀಶ್ ಕೆ.ಹೆಚ್.	ಉಡುಪಿ
13	ಬೂದೆಪ್ಪ ಹೆಚ್.ಬಿ.	ಕೊಪ್ಪಳ
14	ಬಸವರಾಜು	ಮಂಡ್ಯ
15	ಚನ್ನಬಸಪ್ಪ ಕೆ.	ಗುಲ್ಬರ್ಗ
16	ಯೋಗೀಶ್ ಟಿ.	ಬೀದರ್
17	ಶಾಂತ.ಎಲ್. ಹುಲಮನಿ	ತುಮಕೂರು
18	ಪುಷ್ಪಲತಾ. ಹೆಚ್	ಮೈಸೂರು
19	ಅನುರಾಧ ಜಿ.	ದಾವಣಗೆರೆ
20	ಅನಿತಾ ಸಿ.	ಕೋಲಾರ

ಪರೀಕ್ಷಾರ್ಥಿ ಅವಧಿಯಲ್ಲಿ ಪರೀಕ್ಷಾರ್ಥಿಗಳು ಅವರ ಮತ್ತು ಭತ್ಯೆಗಳನ್ನು ಮಹಾಲೇಖಪಾಲರು ನೀಡುವ ವೇತನ ಪಟ್ಟಿಯ ಆಧಾರದ ಮೇಲೆ ನಡೆಯುವುದು.

ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತರಬೇತಿಯ ವೇಳಾ ಪಟ್ಟಿಯಂತೆ ಪರೀಕ್ಷಾರ್ಥಿಗಳು ತರಬೇತಿ ಪಡೆಯಲು ಸೂಕ್ತ ವ್ಯವಸ್ಥೆಯನ್ನು ಮಾಡುವುದು.

ಪರೀಕ್ಷಾರ್ಥಿಗಳು ಪಡೆದ ತರಬೇತಿಯ ವರದಿಯನ್ನು ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಸರ್ಕಾರಕ್ಕೆ ಸಲ್ಲಿಸಬೇಕು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ॥ ಎಂ.ಟಿ. ರೇಜು,

ಸರ್ಕಾರದ ಉಪ ಕಾರ್ಯದರ್ಶಿ,

ಸಿ.ಆ.ಸು.ಇ (ಸೇವೆಗಳು)

ಅನುಬಂಧ

I Functional or Field training		(25 Weeks)	
(a)	Deputy Commissioners Office	6 Weeks	15-11-2010 to 25-12-2010
(b)	Village Accountant Panchayat Secretary and Village level worker	2 Weeks	27-12-2010 to 08-01-2011
(c)	Revenue Inspector	2 Weeks	10-01-2011 to 22-01-2011
(d)	Taluk Office	4 Weeks	24-01-2011 to 19-02-2011
(e)	Asst. Commissioners Office	2 Weeks	21-02-2011 to 05-03-2011
(f)	Superintendent of Police Office	2 Weeks	07-03-2011 to 19-03-2011
(g)	Judicial Court	2 Weeks	21-03-2011 to 02-04-2011
(h)	Other District Office 1. Co-operation 2. Commercial Taxes 3. Treasury 4. Sub Registrars	2 Weeks	04-04-2011 to 16-04-2011
(i)	Municipalities	2 Weeks	18-04-2011 to 30-04-2011
(j)	Regional Commissioners Office	1 Weeks	02-05-2011 to 07-05-2011
II	CHIEF EXECUTIVE OFFICER, ZILLA PANCHAYAT		
	ZILLA PANCHAYAT OTHER DISTRICT OFFICES ;	Total 13 Weeks	
	(a) Gram Panchayath	2 Weeks	09-05-2011 to 21-05-2011
	(b) Taluk Panchayath	2 Weeks	23-05-2011 to 04-06-2011
	(c) ZP with DS (Admn & Devp)	1 Week	06-06-2011 to 11-06-2011
	(d) ZP with CEO	1 Week	13-06-2011 to 18-06-2011
	(e) ZP with P.D. and A.O.	2 Weeks	20-06-2011 to 02-07-2011
	(f) Other Departments	3 Weeks	04-07-2011 to 23-07-2011
	(g) NREGA	1 Week	25-07-2011 to 30-07-2011
	(h) N.G.O.	1 Week	01-08-2011 to 06-08-2011

ಡಾ॥ ಎಂ.ಟಿ. ರೇಜು,
ಸರ್ಕಾರದ ಉಪ ಕಾರ್ಯದರ್ಶಿ,
ಸಿ.ಆ.ಸು.ಇ (ಸೇವೆಗಳು)

ಪಿ.ಆರ್. 1446

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ವಾಕೈ 55 ರೇಉನಿ 2010, ಬೆಂಗಳೂರು, ದಿನಾಂಕ: 16ನೇ ಸೆಪ್ಟೆಂಬರ್, 2010

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಆರ್ಟಿಕಲ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 8(ಎ)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಶ್ರೀ ಪಾಂಡುರಂಗ ಬೊಮ್ಮಯ್ಯ ನಾಯಕ್, ಕೆಎಎಸ್., ಹಿಂದಿನ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರ ಸ್ಥಾನದಲ್ಲಿ ಶ್ರೀ ಡಿ.ಎ. ವೆಂಕಟೇಶ್, ಐಎಫ್ಎಸ್., ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಇವರನ್ನು ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ನಿರ್ದೇಶಕರ ಮಂಡಳಿಗೆ ನಿರ್ದೇಶಕರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಭಾರತಿ ಆರ್. ನಾಯಕ್,
ಪೀಠಾಧಿಕಾರಿ(ರೇಷ್ಮೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 1447

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 446 ಸಅಸೇ 2010, ಬೆಂಗಳೂರು, ದಿನಾಂಕ: 21ನೇ ಸೆಪ್ಟೆಂಬರ್, 2010

ಅಧಿಸೂಚನೆ ಸಂಖ್ಯೆ: **"**ಲೋಇ 348 ಸೇಸಎ 2010**"**, ದಿನಾಂಕ: 15–07–2010 ರಲ್ಲಿ ಶ್ರೀ **ಎ.ಕೆ. ಅಶೋಕ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ** ಇವರನ್ನು ಕರ್ನಾಟಕ ಸರ್ಕಾರ ಸಚಿವಾಲಯದ **ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ವೈಜ್ಞಾನಿಕಾಧಿಕಾರಿ** ಹುದ್ದೆಗೆ ನೇಮಿಸಲು ಇವರ ಸೇವೆಯನ್ನು ಸಿಆಸು ಇಲಾಖೆ ವಶಕ್ಕೆ ನೀಡಲಾಗಿದೆ. ಇದರನ್ವಯ ಶ್ರೀ **ಎ.ಕೆ. ಅಶೋಕ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ** ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ **ವೈಜ್ಞಾನಿಕಾಧಿಕಾರಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ** ಖಾಲಿ ಹುದ್ದೆಗೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಪಿ.ಆರ್. 1448

PERSONNEL AND ADMINISTRATIVE REFORMS SECREITRIAT
NOTIFICATION
No: DPAR 131 SFP 2010, Banglore, Dated 21st September, 2010

The orders posting ***Sri K.S.Sugara, IFS (KN-82) as Chief Conservator of Forests & Secretary, Bayaluseeme Abhivriddi Mandali, Chitradurga*** vide Government Notification No.DPAR 131 SFP 2010, dated 11-08-2010 stands cancelled.

Sri K.S.Sugara, IFS shall report immediately to the ***Principal Chief Conservator of Forests(Head of Forest Force), Bangalore*** for further postings.

By Order and in the name of the Governor of Karnataka,
K.G.ANANTHA,
Under Secretary to Government,
DP & AR (Services-I)

P.R.1449

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 88 ಎಲ್‌ಇಟಿ 2010, ಬೆಂಗಳೂರು, ದಿನಾಂಕ: 22ನೇ ಸೆಪ್ಟೆಂಬರ್, 2010

ಕಾರ್ಮಿಕ ಇಲಾಖೆಯ ಪ್ರಚಾರ ಮತ್ತು ಅಂಕಿ–ಅಂಶ ಶಾಖೆಯಲ್ಲಿ ಮ್ಯಾನೇಜರರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಕೆ. ದೇವಕಿ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಗೆಜೆಟೆಡ್ ಮ್ಯಾನೇಜರ್ ಹುದ್ದೆಗೆ ಸ್ಥಾನಪನ್ನ ಮುಂಬಡ್ತಿ ನೀಡಿ (ವೇತನ ಶ್ರೇಣಿ ರೂ.14050–350–14400–400–16800–450–19500–525–22650–600–25050) ಕೇಂದ್ರ ಕಛೇರಿಯ ಆಡಳಿತ ಶಾಖೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಯು.ಎನ್. ನಾಗೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ

ಪಿ.ಆರ್. 1450

ಅಧಿಸೂಚನೆ

ಸಂಖ್ಯೆ: ಕಾಇ 188 ಎಲ್‌ಇಟಿ 2009(ಭಾ), ಬೆಂಗಳೂರು, ದಿನಾಂಕ: 20ನೇ ಸೆಪ್ಟೆಂಬರ್, 2010

ಸರ್ಕಾರದ ಆದೇಶ ಸಂ.ಕಾಇ 188 ಎಲ್‌ಇಟಿ 2009, ದಿನಾಂಕ: 28–01–2010ರಲ್ಲಿ ಅಮಾನತ್ತಿನಲ್ಲಿಡಲಾಗಿದ್ದ ಕಾರ್ಮಿಕ ಇಲಾಖೆಯ ಶ್ರೀ ಶೇಖ್ ಸಮೀವುಲ್ಲಾ ಷರೀಫ್, ಸಹಾಯಕ ಕಾರ್ಮಿಕ ಆಯುಕ್ತರು, ಇವರ ಮೇಲಿನ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಅಮಾನತ್ತನ್ನು ತೆರವುಗೊಳಿಸಿ, ಸೇವೆಗೆ ಪುನರ್ ಸ್ಥಾಪಿಸಲಾಗಿದೆ. ಹಾಗೂ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಬಳ್ಳಾರಿ ವಿಭಾಗದ ದಾವಣಗೆರೆಯಲ್ಲಿ ಖಾಲಿ ಇರುವ ಸಹಾಯಕ ಕಾರ್ಮಿಕ ಆಯುಕ್ತರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಯು.ಎನ್. ನಾಗೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ

ಪಿ.ಆರ್. 1451

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 82 ಇಆತ 2010, ಬೆಂಗಳೂರು, ದಿನಾಂಕ: 22ನೇ ಸೆಪ್ಟೆಂಬರ್, 2010

ಆರ್ಥಿಕ ಇಲಾಖೆಯ ಅಧಿಸೂಚನೆ ಸಂ: ಆಇ 104 ಆಖಇ 2010 ದಿನಾಂಕ: 26–08–2010ರಲ್ಲಿ ಶ್ರೀ ಆರ್. ಅನಂತಕೃಷ್ಣ, ಸಹಾಯಕ ಖಜಾನಾಧಿಕಾರಿಯವರನ್ನು ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು (ಗ್ರಾಮಾಂತರ) ಇಲ್ಲಿ ಪತ್ರಾಂಕಿತ ಬೋಧಕರ ಹುದ್ದೆಗೆ ನಿಯೋಜನೆಯ ಮೇರೆಗೆ ನೇಮಕ ಮಾಡುವ ಸಲುವಾಗಿ ಇವರ ಸೇವೆಯನ್ನು ಸಿಆಸುಇ (ಆಸು)ಯ ವಶಕ್ಕೆ ನೀಡಲಾಗಿದೆ. ಅದರಂತೆಯೇ, ಶ್ರೀ ಆರ್. ಅನಂತಕೃಷ್ಣ, ಸಹಾಯಕ ಖಜಾನಾಧಿಕಾರಿ, ಖಜಾನೆ ಇಲಾಖೆ, ಇವರನ್ನು ಮೇಲ್ದರ್ಜೆಗೇರಿಸಲಾದ ಪತ್ರಾಂಕಿತ ಭೋಧಕರು, ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು (ಗ್ರಾಮಾಂತರ) ಈ ಹುದ್ದೆಯಲ್ಲಿ ದಿನಾಂಕ: 24–06–2010ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲು ಸಂಭವಿಸುತ್ತದೆಯೋ, ಅಲ್ಲಿಯವರೆಗೆ ನಿಯೋಜನೆ ಮೇಲೆ ನೇಮಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಅಬ್ದುಲ್ ರಹಮಾನ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ಆಸು–ತರಬೇತಿ)

ಪಿ.ಆರ್. 1452

HIGH COURT OF KARNATAKA
NOTIFICATION
No: GOB(I)3/ 2010, Bangalore, Dated 17th September, 2010

The Presiding Officer of the Court of Addl. Civil Judge & JMFC, Kollegal, is concurrently appointed as the Presiding Officer of the court of Civil Judge and JMFC., Yelandur, with a direction to itinerate the said court for three days in a week, i.e., on every working Thursday, Friday and Saturday, with immediate effect and until further orders.

By Order of the High Court,
R.B.BUDIHAL
Registrar General.

P.R.1453